

# ಅಗಣಿತ ಚಿತ್ರಗಳ ಕುಂಭ ಮೇಳ

**ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳ ದೇಶದ ಗಮನಸೆಳೆದಿದೆ. ಸಂಭ್ರಮದ ನಡುವೆ ಸಾವುನೋವುಗಳ ಘಟನೆಯೂ ನಡೆದಿದೆ. ಕುಂಭಮೇಳದಲ್ಲಿ ಭಾಗವಹಿಸಿ ಬಂದ ಕನ್ನಡತಿಯೊಬ್ಬರ ಈ ಅನುಭವ ಕಥನ, ದೇಶದ ಬಹುದೊಡ್ಡ ಧಾರ್ಮಿಕ ಮೇಳದ ಭಾವ–ಬಣ್ಣಗಳನ್ನು ಕಾಣಿಸುವಂತಿದೆ.**

**■ ಶಾಂತಾ ಜಯಾನಂದ್**

ಕುಂಭಮೇಳಕ್ಕೆ ಹೊರಟ ನಮಗೆ ಎರಡು ರೀತಿಯ ಪ್ರತಿಕ್ರಿಯೆಗಳು ಎದುರಾದವು: ‘ಹುಷಾರು, ತುಂಬಾ ಚಳಿ ಇದೆ’, ‘ನದಿ ಎಲ್ಲಾ ಕೊಳಕಾಗಿರುತ್ತೆ. ಎಂತಕ್ಕೆ ಅಲ್ಲಿಗೆ ಹೋಗುವುದು? ಬೇರೆ ಸಮಯದಲ್ಲಿ ಹೋದ್ರೆ ಆಗದೆ?’, ‘ಊಟ ತಿಂಡಿ ವ್ಯವಸ್ಥೆ ಹೇಗಿದೆಯೋ?’, ‘ಅಷ್ಟು ಜನಗಳ ನಡುವೆ ಎಲ್ಲಾದರೂ ಕಳೆದುಹೋದೀರಾ ಜೋಕೆ?’ ಈ ಬಗೆಯ ಪ್ರಶ್ನೆಗಳ ಜೊತೆಗೆ, ‘ಪುಣ್ಯವಂತರಪ್ಪಾ ನೀವು, ಹೋಗಿ ಬನ್ನಿ. ಬರುವಾಗ ನಮಗೂ ಸ್ವಲ್ಪ ತೀರ್ಥ ತುಂಬಿಕೊಂಡು ಬನ್ನಿ’, ‘ನೀವು ಹೋಗಿ ಬನ್ನಿ. ಆಮೇಲೆ ನಾವು ಹೋಗೋಕೆ ಪ್ರಯತ್ನಿಸುತ್ತೇವೆ’ ಎನ್ನುವ ಪ್ರತಿಕ್ರಿಯೆಗಳು ಎದುರಾದವು. ಈ ಪ್ರತಿಕ್ರಿಯೆಗಳ ನಡುವೆಯೇ ನಮ್ಮ ಲಗೇಜು ಪ್ಯಾಕ್ ಆಯ್ತು.

ಬೆಂಗಳೂರಿನಿಂದ ಸೀದಾ ಅಯೋಧ್ಯೆಯ ಏರ್‌ಪೋರ್ಟ್‌ಗೆ ಬಂದಿಳಿದಾಗ ಚಂದ ವಾಸ್ತುಶಿಲ್ಪದ ವಿಮಾನ ನಿಲ್ದಾಣ ಹಾಗೂ ವಿಮಾನ ನಿಲ್ದಾಣದಲ್ಲಿನ ವಾಲ್ ಪೇಂಟಿಂಗ್‌ಗಳು ಗಮನಸೆಳೆದವು. ರಾಮಾಯಣದ ಕಥಾಹಂದರವನ್ನು ಅಲ್ಲಿ ಕಾಣಬಹುದಾಗಿತ್ತು. ಅಲ್ಲಿಂದ ಕಾರಿನಲ್ಲಿ ನಮ್ಮ ಪಯಣ ಪ್ರಯಾಗ್‌ರಾಜ್‌ನತ್ತ. ಅಲ್ಲಿ, ಸೀದಾ ನಮಗೆಂದು ಕಾದಿರಿಸಿದ್ದ ‘ಸಂಗಮ್ ಟೆಂಟ್’ಗಳಿಗೆ ಹೋದೆವು.

ಬಹಳ ಸ್ವಚ್ಛ ಹಾಗೂ ಆಧುನಿಕ ಟೆಂಟ್‌ಗಳವು. ಮೊದಲೇ ಬುಕಿಂಗ್ ಆಗಿದ್ದುದರಿಂದ ಯಾವುದೇ ತೊಂದರೆ ಆಗಲಿಲ್ಲ. ‘ತುಳಸಿ ಮಾಲೆ’ಯ ಮಣಿಯಿಂದ ಸ್ವಾಗತ ಕೋರಿದರು. ಚಳಿಗೆ ಬಿಸಿಯಾದ ಚಹಾ ಕುಡಿದು, ಪ್ರಯಾಗ್‌ರಾಜ್‌ನಲ್ಲಿ ಬೀದಿ ಸುತ್ತಲು ಹೊರಟೆವು. ನಮ್ಮದು ಒಟ್ಟು ಹತ್ತು ಮಂದಿ ಸ್ನೇಹಿತೆಯರು, ಕುಟುಂಬದವರು ಇದ್ದ ಗುಂಪು. ಪ್ರಯಾಗ್‌ರಾಜ್‌ನ ಬೀದಿಗಳಲ್ಲಿ ಎಲ್ಲೆಲ್ಲೂ ರಾಮಾಯಣವನ್ನು ನೆನಪಿಸುವ ಹಲವಾರು ಚಿತ್ರಗಳಿದ್ದವು.

ರಸ್ತೆಗಳು ಸ್ವಚ್ಛವಾಗಿದ್ದವು. ಎಲ್ಲೆಲ್ಲೂ ತಲೆ ಎತ್ತಿದ ಅಂಗಡಿಗಳು, ಫುಡ್ ಕೋರ್ಟ್‌ಗಳು, ಮಾರ್ಗದರ್ಶಿ ಫಲಕಗಳು. ನಾವು ರಸ್ತೆಯುದ್ದಕ್ಕೂ ಕೊರೆಯುವ ಚಳಿಯಲ್ಲಿ ಓಡಾಡಿ, ಬಾಲ್ಯದಲ್ಲಿ ತಿನ್ನುತ್ತಿದ್ದ ಪೆಪ್ಪರ್‌ಮೆಂಟ್‌ಗಳು, ಬಿಸಿ ಬಿಸಿ ಜಿಲೇಬಿ, ಮೊಳಕೆ ಕಾಳುಗಳ ಸಲಾಡ್, ಸ್ಟ್ರೀಟ್ ಫುಡ್‌ಗಳನ್ನೆಲ್ಲಾ ತಿಂದು ಓಡಾಡಿದೆವು. ಮಂಜು ತುಂಬಿದ ಆಗಸದಲ್ಲಿ ಹುಣ್ಣಿಮೆಯ ಚಂದಿರ ನಗುತಲಿದ್ದ.

ನದಿಯ ತೀರದಲ್ಲಿ ಸಾಲು ಸಾಲು ತಾತ್ಕಾಲಿಕ ಶೌಚಗೃಹಗಳನ್ನು ನಿರ್ಮಿಸಲಾಗಿತ್ತು. ‘ಬ್ಲೂ’ ಮತ್ತು ‘ಪಿಂಕ್’ – ಮಹಿಳೆಯರಿಗೆ ಮತ್ತು ಪುರುಷರಿಗೆಂದೇ ಬೇರೆ ಬೇರೆ. ಸುಮಾರು ಕಿಲೋ ಮೀಟರ್ ಹಿಂದಿನಿಂದಲೇ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು, ಪಾರ್ಕಿಂಗ್‌ಗಾಗಿ ವಿಶೇಷ ವ್ಯವಸ್ಥಿತ ಜಾಗ ನಿರ್ಮಿಸಲಾಗಿತ್ತು.

ನಾವು ನಮ್ಮ ಟೆಂಟ್‌ಗಳ ಬಳಿಗೆ ಹೇಗೋ ಮಾಡಿ ನಮ್ಮ ಕಾರನ್ನು ತೆಗೆದುಕೊಂಡು ಹೋಗಬೇಕಾದರೆ ಸಾಕಾಗಿ ಹೋಗಿತ್ತು. ಸಾವಿರಾರು ಟೆಂಟ್‌ಗಳನ್ನು ವಿವಿಧ ವರ್ಗದವರಿಗೆ ಅನುಕೂಲವಾಗುವಂತೆ ನಿರ್ಮಿಸಲಾಗಿತ್ತು.

ಕುಂಭಮೇಳದಲ್ಲಿ ಮಕ್ಕಳು, ಮಹಿಳೆಯರು, ಹಿರಿಯರು ಸೇರಿದಂತೆ ನನ್ನ ಜೀವಮಾನದಲ್ಲೇ ನೋಡದಷ್ಟು ಜನಸಾಗರವನ್ನು ನೋಡಿದೆ. ತಲೆಯ ಮೇಲೆ, ಕೈಲಿ, ಸೊಂಟದಲ್ಲಿ ಲಗೇಜನ್ನು ತೆಗೆದುಕೊಂಡು ಲೀಲಾಜಾಲವಾಗಿ